ಆ) ಅಪ್ಸರಕೊಂಡ ಅಭಿವೃದ್ಧಿ ಯೋಜನೆಗೆ ರೂ. 40.00 ಲಕ್ಷಗಳು, ಜೈನ ಬಸದಿ ಅಭಿವೃದ್ಧಿ ಯೋಜನೆಗೆ ರೂ. 10.00 ಲಕ್ಷಗಳು.

ಸಿ. ಆರ್. ಝಡ್ ಕಾನೂನು

3330 (4038) : ಶ್ರೀ ನಾಯಕ್ ಜೆ.ಡಿ. (ಭಟ್ಕಳ) ಮಾನ್ಯ ವಾರ್ತಾ, ಪರಿಸರ, ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿ.ಆರ್. ಝಡ್, (CRZ) ಕಾನೂನಿನ ಪ್ರಕಾರ ಮಾಹಿತಿಗೆ ಇರತಕ್ಕ ಎನ್.ಜಿ.ಓ (N.G.O) ಸಂಸ್ಥೆಗಳು ರಾಜ್ಯದಲ್ಲಿ ಎಷ್ಟಿವೆ?

ಆ) ಕೆಲವು ಎನ್.ಜಿ.ಓ (N.G.O) ಸಂಸ್ಥೆಗಳು ಕರಾವಳಿ ಪ್ರದೇಶದಲ್ಲಿ (N.G.O) ಸಂಸ್ಥೆಯ ಹೆಸರಿನಲ್ಲಿ ಬಡವರಿಗೆ, ಅಮಾಯಕರಿಗೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸಿ.ಆರ್. ಝಡ್. ಅಧಿಸೂಚನೆ ಸರ್ಕಾರೇತರ ಸಂಸ್ಥೆಗಳ ಅಧಿಸೂಚನೆಗೆ ಅವಕಾಶ ಕಲ್ಪಿಸಿರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಐಹೋಳೆ ಅತಿಥಿಗೃಹಗಳಿಗೆ ಪೀಠೋಪಕರಣಗಳು

3331 (3773) : ಶ್ರೀ ನಂಜಯ್ಯನಮಠ್ ಎಸ್.ಜಿ. (ಗುಳೇದಗುಡ್ಡ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಐಹೋಳೆ ಐತಿಹಾಸಿಕ ಸ್ಥಳದಲ್ಲಿಯ ಅತಿಥಿಗೃಹಗಳ ದಾರುಣ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗುವುದು?

ಇ) ಹೊಸ ಅತಿಥಿಗೃಹಗಳಿಂದ ಪೀಠೋಪಕರಣಗಳನ್ನು ಒದಗಿಸುವ ಯೋಚನೆ ಸರ್ಕಾರಕ್ಕಿದೆಯೇ; ಹಾಗಾದರೆ ಯಾವಾಗ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು)

ಅ) ಬಂದಿದೆ.

ಆ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಈ ಅತಿಥಿ ಗೃಹವನ್ನು ಖಾಸಗೀ ನಿರ್ವಹಣೆಗೆ ವಹಿಸುವ ಬಗ್ಗೆ ತೆಗೆದುಕೊಂಡ ಕ್ರಮವು ವಿಫಲವಾದ್ದರಿಂದ ಈಗ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವೇ ನವೀಕರಿಸಿ ಈ ಘಟಕವನ್ನು ಪ್ರಾರಂಭಿಸಲಾಗುವುದು.

ಇ) ಇದೆ.

ಅತಿ ಶೀಘ್ರದಲ್ಲಿ.

ಕೊಳ್ಳೇಗಾಲದಲ್ಲಿ ಕಲುಷಿತ ನೀರು

3332 (4818) : ಶ್ರೀ ಜಿ.ಎನ್. ನಂಜುಂಡಸ್ವಾಮಿ (ಕೊಳ್ಳೇಗಾಲ) ಮಾನ್ಯ ವಾರ್ತಾ, ಪರಿಸರ, ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?